೧೯೯೧-೯೨ರ ಪ್ರವಾಸಿ ವರ್ಷದ ಭಾರತ ಸಂದರ್ಶಿಸಿ ಆಚರಣೆಯಲ್ಲಿ ಬಸವಕಲ್ಯಾಣದಲ್ಲಿ ಕಾರ್ಯಕ್ರಮ

೧೪೦೧ (೧೮೪೫) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೧-೯೨ರ ಪ್ರವಾಸಿ ವರ್ಷದ ಭಾರತ ಸಂದರ್ಶಿಸಿ ಆಚರಣೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು?

ಆ) ಸರ್ಕಾರ ಬಸವಕಲ್ಯಾಣ ತಾಲ್ಲೂಕಿಗೆ ಪ್ರಸ್ತುತ ವರ್ಷ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಆ) ಪ್ರಸ್ತುತ ವರ್ಷದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಧಾರವಾಡ ಜಿಲ್ಲಾಪರಿಷತ್ತಿನಿಂದ ನೆರವಾಡ-ಸವಣೂರು ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡುವುದು

೧೪೦೨ (೧೮೪೬) ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಧಾರವಾಡ ಜಿಲ್ಲೆಯಲ್ಲಿರುವ ನೆರವಾಡ-ಸವಣೂರು ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯು ಪಡೆದುಕೊಂಡಿದಯೇ?

ಆ) ಹಾಗಿದ್ದಲ್ಲಿ ಯಾವ ಯಾವ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ಪಡೆದುಕೊಂಡಿತು?

ಇ) ಲೋಕೋಪಯೋಗಿ ಇಲಾಖೆಯು ಈ ರಸ್ತೆಯನ್ನು ಪಡೆದುಕೊಂಡು ಸುಧಾರಣೆ ಮಾಡದಿರುವುದನ್ನು ಪ್ರತಿಭಟಿಸಿ ಸಾರ್ವಜನಿಕರು ರಾಸ್ತಾ ರೊಕೋ ಮಾಡಿದ್ದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಮೇಲ್ಕಂಡ ರಸ್ತೆಯ ದುರಸ್ತಿ ಮಾಡಲು ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಉ) ಮೇಲ್ಕಂಡ ರಸ್ತೆಯನ್ನು ಸುಧಾರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಪೆಚ್. ಅಪ್ಪತ್ತ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಇಲ್ಲ.

ಆ) ಯಾವುದೂ ಇಲ್ಲ. ಆದರೆ ಆದೇಶ ಸಂಖ್ಯೆ ಪಿ. ಡಬ್ಲ್ಯು. ಡಿ. ೬೮ ಸಿಆರ್‌ಎಂ ೯೯ ದಿನಾಂಕ ೧೪-೩-೧೯೯೨ರಂತೆ, ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ

ವಿಧಾನ ಸಭಾ ಕ್ಷೇತ್ರಕ್ಕೆ ೫೦ ಕಿ. ಮೀ. ಮೀರದಂತೆ, ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗುವುದು. ರಸ್ತೆಗಳ ವಿವರಣೆಗಳನ್ನು ಶೀಘ್ರವಾಗಿ ತೀರ್ಮಾನಿಸಲಾಗುವುದು.

೫) ಗಮನಕ್ಕೆ ಬಂದಿದೆ.

ಈ) ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಯನ್ನು ಸಾಧ್ಯವಿದ್ದ ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಉ) ಶೀಘ್ರದಲ್ಲಿ ಈ ರಸ್ತೆಯನ್ನು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಷಯವನ್ನು ತೀರ್ಮಾನಿಸಲಾಗುವುದು.

ವರದಾ ನದಿಯ ಮೇಲೆ ಹಾಯ್ದು ಹೋಗುವ ವಾಹನಗಳಿಂದ ಸುಂಕ ವಸೂಲಿ

೧೪೦೩ (೧೫೮೭) ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ವರದಾ ನದಿಯ ಮೇಲೆ ಹಾಯ್ದು ಹೋಗುವ ವಾಹನಗಳಿಂದ ಸುಂಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರಕ್ಕೆ ಇದರಿಂದ ಪ್ರಾರಂಭದಿಂದ ಇಲ್ಲಿಯವರೆಗೆ ಬಂದಿರುವ ಹಣವೆಷ್ಟು?

ಇ) ಈ ನದಿಯ ಮೇಲೆ ಕಟ್ಟಿರುವ ಸೇತುವೆಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು?

ಈ) ಈ ಸುಂಕ ವಸೂಲಾತಿಯನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?

ಉ) ಈ ಸುಂಕ ವಸೂಲಾತಿಯಲ್ಲಿ ಅವ್ಯವಹಾರಗಳು ನಡೆದ ಬಗ್ಗೆ ಸರ್ಕಾರಕ್ಕೆ ಮಾಹಿತಿಗಳೇನಾದರೂ ಬಂದಿದೆಯೇ?

ಊ) ಎಷ್ಟು ಬಾರಿ ಅಧಿಕಾರಿಗಳು ಈ ಬಗ್ಗೆ ತನಿಖೆ ನಡೆಸಿದ್ದಾರೆ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಈ ಸೇತುವೆಯ ಮೇಲೆ ಈವರೆವಿಗೆ ವಸೂಲಾತಿಯಾಗಿರುವ ಸುಂಕದ ಮೌಲ್ಯವು ೧.೨೪ ಕೋಟಿ ರೂ. ಗಳು.

ಇ) ಈ ನದಿಯ ಮೇಲೆ ಕಟ್ಟಿರುವ ಸೇತುವೆಗೆ ಹಾಗೂ ಕೂಡು ರಸ್ತೆಗಳಿಗೆ ಒಟ್ಟು ೨,೧೪,೫೮,೬೫೪-೦೦ ರೂ. ಗಳನ್ನು ಖರ್ಚು ಮಾಡಲಾಗಿದೆ.

ಈ) ರಾಷ್ಟ್ರೀಯ ಹೆದ್ದಾರಿ ಕಾಯಿದೆಯ ಪ್ರಕಾರ ಈ ರೀತಿ ಸುಂಕ ವಸೂಲಿ ಮಾಡಲಾಗುತ್ತಿದೆ. ಸೇತುವೆಗೆ ಹಾಗೂ ಕೂಡು ರಸ್ತೆಗಳಿಗೆ ಮಾಡಿರುವ ಹಣ ಅದರ ಮೇಲಿನ ಬಡ್ಡಿ ಹಾಗೂ ನಿರ್ವಹಣಾ ವೆಚ್ಚ ಇವೆಲ್ಲವೂ ವಸೂಲಾಗುವವರೆಗೂ ಸುಂಕ ವಸೂಲಾತಿ ಮಾಡಿ ನಂತರ ನಿಲ್ಲಿಸಲಾಗುವುದು.